ಕಮಲಾಪುರ ಕ್ಷೇತ್ರದ ವ್ಯಾಪ್ತಿಯ ಮುಳುಗಡೆ ಪ್ರದೇಶದ ಸಂತ್ರಸ್ತ ಕುಟುಂಬದವರಿಗೆ ಪರಿಹಾರ ನೀಡುವ ಬಗ್ಗೆ.

4262 (4904) : ಶ್ರೀ ರೇವು ನಾಯಕ್ ಬೆಳಮಗಿ(ಕಮಲಪೂರ್) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆ ಕಮಲಾಪುರ ಮತಕ್ಷೇತ್ರ ವ್ಯಾಪ್ತಿಯ ಬೆಳಕೋಟಾ ಧಮ್ಮೂರ ಗಂಡೋರಿ ನ್ಹಾಲಾ ಯೋಜನೆಗಳಡಿಯಲ್ಲಿ ಮುಳಗಡೆ ಪ್ರದೇಶದ ವಸತಿ ಭೂ ಪರಿಹಾರವನ್ನು ಎಷ್ಟು ಕುಟುಂಬಗಳಿಗೆ ನೀಡಲಾಗಿದೆ ?

ಆ) ಪರಿಹಾರಕ್ಕೆ ಬಾಕಿ ಇರುವ ಕುಟುಂಬಗಳೆಷ್ಟು; ಬಾಕಿ ಇರಲು ಕಾರಣಗಳೇನು ? (ವಿವರ ಒದಗಿಸುವುದು)

ಶ್ರೀ ಹೆಚ್.ಕೆ.ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಗಂಡೋರಿ ನಾಲಾ ಯೋಜನೆ ಮುಳುಗಡೆಯಲ್ಲಿ ಬರುವ ಬೆಳಕೋಟ ಹಾಗೂ ಧಮ್ಮೂರ ಗ್ರಾಮಗಳಲ್ಲಿ ಒಟ್ಟು 686 ಕುಟುಂಬಗಳಿಗೆ ಭೂ ಹಾಗೂ ವಸತಿ ಪರಿಹಾರ ಧನ ನೀಡಲಾಗಿದೆ. (ಬೆಳಕೋಟ ಗ್ರಾಮದ 383 ಕುಟುಂಬಗಳಿಗೆ ಹಾಗೂ ಧಮ್ಮೂರ ಗ್ರಾಮದ 303 ಕುಟುಂಬಗಳಿಗೆ ಭೂ ಹಾಗೂ ವಸತಿ ಪರಿಹಾರವನ್ನು ನೀಡಲಾಗಿದೆ).

ಆ) ಬಾಕಿ 60 ಕುಟುಂಬಗಳಿಗೆ ಪರಿಹಾರ ನೀಡಬೇಕಾಗಿದೆ. ಈ ಕುಟುಂಬಗಳ ಮನೆಗಳ ಸ್ವಾಧೀನಕ್ಕೆ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಪ್ರಸ್ತಾವನೆ ವಿವಿಧ ಹಂತದಲ್ಲಿರುತ್ತದೆ.

ಕಮಲಾಪುರ ಮತಕ್ಷೇತ್ರದಲ್ಲಿ ಬ್ರಿಜ್ ಕಮ್ ಬ್ಯಾರೇಜ್ ನಿರ್ಮಾಣ ಮಾಡುವ ಬಗ್ಗೆ.

4263 (4905) : ಶ್ರೀ ರೇವು ನಾಯಕ್ ಬೆಳಮಗಿ (ಕಮಲಪೂರ್) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆ ಕಮಲಾಪುರ ಮತಕ್ಷೇತ್ರದಲ್ಲಿರುವ ನೀರಾವರಿ ಇಲಾಖೆಯ ವಿವಿಧ ಯೋಜನೆಗಳ ಬ್ರಿಜ್–ಕಮ್–ಬ್ಯಾರೇಜುಗಳು ಎಷ್ಟು ? ಅವು ಯಾವುವು ? (ವಿವರ ನೀಡುವುದು)

ಆ) ಬೆಣ್ಣೆತೋರಾ ಹತ್ತರಗಾ–ಹಿಪ್ಪರಗಾ ಬಳಿಗಳಲ್ಲಿ ಬ್ರಿಜ್–ಕಮ್–ಬ್ಯಾರೇಜುಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಯೋಜನೆ ಯಾವ ಹಂತದಲ್ಲಿದೆ.

ಇ) ಯಾವಾಗ ಈ ಬ್ರಿಜ್–ಕಮ್–ಬ್ಯಾರೇಜನ್ನು ನಿರ್ಮಾಣ ಮಾಡಲಾಗುವುದು ? ಇವುಗಳಿಗೆ ತಗಲುವ ವೆಚ್ಚವೆಷ್ಟು ? (ವಿರವ ನೀಡುವುದು)

ಶ್ರೀ ಹೆಚ್.ಕೆ.ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) " ನಮ್ಮೂರ ಬಾಂದಾರ" ಯೋಜನೆಯಡಿಯಲ್ಲಿ ರಾಜ್ಯದ ಎಲ್ಲಾ ನದಿಗಳು/ಮುಖ್ಯ ಹಳ್ಳಗಳಿಗೆ ಬಾಂದಾರುಗಳನ್ನು ನಿರ್ಮಿಸಲು ಸ್ಥಳ ಗುರುತಿಸುವಿಕೆಯು ನಡೆದಿದ್ದು ಇದಾದ ನಂತರ ವಿವರಗಳು ಲಭ್ಯವಾಗುವುದು.

ಆ) ಈ ಯೋಜನೆ ಬಗ್ಗೆ ವರದಿಯನ್ನು ಪಡೆಯಲಾಗುತ್ತಿದೆ.

ಇ) " ನಮ್ಮೂರ ಬಾಂದಾರ " ಯೋಜನೆಯಡಿಯಲ್ಲಿ ಕೈಗೊಳ್ಳಲು ಯೋಜಿಸಿರುವ ಬ್ಯಾರೇಜುಗಳ ಸ್ಥಳ ಗುರುತಿಸುವಿಕೆ ಕಾರ್ಯವನ್ನು ನಡೆಸಿದ್ದು ತನಿಖಾ ವರದಿಯ ನಂತರ ಯೋಜನೆಗಳ ಅಂದಾಜುಗಳನ್ನು ತಯಾರಿಸಲಾಗುವುದು. ಇದರ ನಂತರ ಈ ವಿವರಗಳು ಲಭ್ಯವಾಗುವುದು.